ಗ್ರಂಥಿ ಸಂಸ್ಥೆ	– ಇಲ್ಲ –
ಶ್ರೀ ಜಯದೇವ ಹೃದ್ರೋಗ ಮತ್ತು ವಿಜ್ಞಾನ ಸಂಸ್ಥೆ	– ರೂ. 5.00 ಕೋಟಿ

ಆ)

	ಬಿಡುಗಡೆ	ಖರ್ಚು
ಎಸ್.ಡಿ.ಎಸ್	ರೂ.1.5 ಕೋಟಿ	ರೂ. 1.5 ಕೋಟಿ
ಕಿದ್ವಾಯಿ	–ಇಲ್ಲ–	ರೂ. 5.00 ಕೋಟಿ
ಜಯದೇವ	ರೂ.5.00 ಕೋಟಿ	

ಇ) ಎಸ್.ಡಿ.ಎಸ್	– ಇಲ್ಲ
ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ	– ಇಲ್ಲ
ಶ್ರೀ ಜಯದೇವ ಹೃದ್ರೋಗ ಮತ್ತು ವಿಜ್ಞಾನ ಸಂಸ್ಥೆ	– ಇಲ್ಲ

ಭಾಲ್ಕಿ 100 ಹಾಸಿಗೆಗಳ ಆಸ್ಪತ್ರೆ

855 (1417) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿಯಲ್ಲಿ 100 ಹಾಸಿಗೆಗಳ ಆಸ್ಪತ್ರೆಯನ್ನು ಯಾವಾಗ ಪ್ರಾರಂಭಿಸಲಾಯಿತು;

ಆ) ಈ ಆಸ್ಪತ್ರೆಯಲ್ಲಿ 100 ಹಾಸಿಗೆಗಳು ಮತ್ತು 100 ಮಂಚಗಳ ಬದಲಾಗಿ 50 ಹಾಸಿಗೆಗಳು ಮತ್ತು 50 ಮಂಚಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಮಂಜೂರಾಗಿರುವ ಹಾಸಿಗೆಗಳು ಮತ್ತು ಮಂಚಗಳ ಸೌಲಭ್ಯವಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಲೋಪಕ್ಕೆ ಕಾರಣ ಯಾರು;

ಈ) ಇದಕ್ಕೆ ಕಾರಣರಾದವರ ಮೇಲೆ ಸರ್ಕಾರ ಕೈಗೊಳ್ಳಲಿರುವ ಶಿಸ್ತು ಕ್ರಮಗಳು ಯಾವುವು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಭಾಲ್ಕಿಯಲ್ಲಿ 100 ಹಾಸಿಗೆಗಳ ಆಸ್ಪತ್ರೆಯನ್ನು ದಿನಾಂಕ: 21-01-2007 ರಂದು ಪ್ರಾರಂಭಿಸಲಾಯಿತು.

ಆ) ಈ ಆಸ್ಪತ್ರೆಯಲ್ಲಿ 93 ಹಾಸಿಗೆಗಳು ಹಾಗೂ 93 ಮಂಚಗಳು ಲಭ್ಯವಿವೆ. ಆದರೆ, ಹಾಸಿಗೆಗಳ ಉಪಯೋಗ ಪ್ರಮಾಣ ಸುಮಾರು 50 ಆಗಿದೆ.

ಇ) ಈ ಆಸ್ಪತ್ರೆಯಲ್ಲಿ 100 ಹಾಸಿಗೆಗಳು/ಮಂಚಗಳ ಪೈಕಿ 93 ಹಾಸಿಗೆಗಳು/ಮಂಚಗಳು ಲಭ್ಯವಿದ್ದು, ಉಪಯೋಗ ಪ್ರಮಾಣ ಸುಮಾರು 50 ಇದ್ದ ಕಾರಣ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಶಿಕ್ಷಕರಿಗೆ ಸಂಬಳ ಬಾಕಿ ಇರುವುದು

856 (1418) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಸಂಖ್ಯೆ ಎಷ್ಟು ಈ ವಸತಿ ಶಾಲೆಗಳಿಗೆ ಶಿಕ್ಷಕರನ್ನು ಔಟ್ ಸೋರ್ಸಿಂಗ್ ಮೂಲಕ ನೇಮಕಾತಿ ಮಾಡಿಕೊಂಡಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ, ಶಿಕ್ಷಕರುಗಳಿಗೆ ನಿಯಮಿತವಾಗಿ ಸಂಬಳ ದೊರೆಯದೇ ಇವರುಗಳು ತೊಂದರೆಗೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಎಷ್ಟು ತಿಂಗಳಿನಿಂದ ಈ ಶಿಕ್ಷಕರುಗಳಿಗೆ ಸಂಬಳ ನೀಡಬೇಕಾಗಿದೆ.

ಈ) ಹಲವಾರು ತಿಂಗಳುಗಳಿಂದ ಬಾಕಿ ಇರುವ ಶಿಕ್ಷಕರ ವೇತನವನ್ನು ಪಾವತಿ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು.?